## ಟಿಪ್ಪಣಿ

**ಕೆಲಸದ ಹೆಸರು** :- ಕೆ.ಎಂ.ಆರ್.ಪಿ ಯೋಜನೆಯ ಅಡಿಯಲ್ಲಿ ಚಿಕ್ಕಬಳ್ಳಾಪುರ ನಗರಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿ.

**ಅಂದಾಜು** :- ರೂ. 22.60 ಕೋಟಿಗಳು.

**ಗುತ್ತಿಗೆದಾರರು** :- M/S Ramkey Infrastructure limited
Hydrebad-82

**ಕೆಲಸದ ಅವಧಿ** :- 18 ತಿಂಗಳು (ದಿನಾಂಕ: 23/03/2010 – 22/09/2011)

**ಕೆಲಸದ ಮೇಲುಸ್ತುವಾರಿ** :- ಸಹಾಯಕ ಕಾರ್ಯಪಾಲಕ ಅಭಿಯಂತರರು(KMRP), ನಗರಸಭೆ, ಚಿಕ್ಕಬಳ್ಳಾಪುರ

**ಕನ್ಸಲ್‌ಟೆನ್ಸಿ** :- M/S ವ್ಯಾಪ್‌ಕೋಸ್, ಬೆಂಗಳೂರು

**3ನೇ ತನಿಖಾ ವ್ಯಕ್ತಿಗಳು** :- ಮೆ|| ಶಾಂತಲಾ ಪವರ್ ಲಿಮಿಟೆಡ್, ಹುಬ್ಬಳ್ಳಿ.

**4ನೇ ತನಿಖಾ ವ್ಯಕ್ತಿಗಳು** :- ಮೆ|| ಗೂಳೇ ಕನ್ಸಲ್‌ಟೆನ್ಸಿ ಸರ್ವಿಸಸ್, ಬೆಂಗಳೂರು.

**************

ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಚಿಕ್ಕಬಳ್ಳಾಪುರ ನಗರದಲ್ಲಿ ಪ್ರಗತಿಯಲ್ಲಿರುವ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯ ವೀಕ್ಷಣೆ ಸಮಯದಲ್ಲಿ ಹಾಜರಿದ್ದ ಸಾರ್ವಜನಿಕರು ಮೇಲ್ಕಂಡ ಕಾಮಗಾರಿಯ ಗುಣಮಟ್ಟದ ಬಗ್ಗೆ ಮತ್ತು ಮ್ಯಾನ್‌ಹೋಲ್‌ಗಳ ಪ್ಲಾಸ್ಟರಿಂಗ್, ಕ್ಯೂರಿಂಗ್ ಬಗ್ಗೆ ದೂರು ನೀಡಿದ್ದರ ಮೇರೆಗೆ ದಿನಾಂಕ: 03-02-2011 ರಂದು ಈ ಕಛೇರಿಯಿಂದ ಮೆ|| ಗೂಳೇ ಕನ್ಸಲ್‌ಟೆನ್ಸಿ ಸರ್ವಿಸಸ್, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವಿಸಸ್, ಬೆಂಗಳೂರು. ಇವರಿಗೆ ಮೇಲ್ಕಂಡ ಕಾಮಗಾರಿಯ ಗುಣಮಟ್ಟನ್ನು ಪರಿಶೀಲಿಸಿ ತನಿಖಾ ವರದಿ ನೀಡಲು ಸೂಚಿಸಲಾಗಿತ್ತು.

ಅದರಂತೆ ಸದರಿಯವರು ದಿನಾಂಕ: 04-02-2011 ಹಾಗೂ 07-02-2011 ಅನಿರೀಕ್ಷಿತವಾಗಿ ಚಿಕ್ಕಬಳ್ಳಾಪುರ ನಗರದಲ್ಲಿ ನಡೆಯುತ್ತಿರುವ ಕೆ.ಎಂ.ಆರ್.ಪಿ ಯೋಜನೆಯಡಿಯಲ್ಲಿ ಒಳಚರಂಡಿ ವ್ಯವಸ್ಥೆ ಕಲಿಸುವ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಈಗಾಗಲೇ ನಿರ್ಮಿಸಿರುವ ಒಟ್ಟು 1800 ಮ್ಯಾನ್‌ಹೋಲ್‌ಗಳ ಪೈಕಿ, ವಿವಿಧ ರಸ್ತೆಯಲ್ಲಿ ಈಗಾಗಲೇ ನಿರ್ಮಿಸಿರುವ ಒಟ್ಟು 18 ಮ್ಯಾನ್‌ಹೋಲ್‌ಗಳಲ್ಲಿ ಸಿಮೆಂಟ್ ಮಡ್ಡಿ, ಹಾಗೂ ಆ ಸಮಯದಲ್ಲಿ ಮ್ಯಾನ್‌ಹೋಲ್‌ಗಳ ಬಳಿ ನಿರ್ಮಿಸಲು ಶೇಖರಿಸಿದ್ದ ಇಟ್ಟಿಗೆ, ಜೆಲ್ಲಿ, ಸಿಮೆಂಟ್ ಹಾಗೂ ಮರಳನ್ನು ಹೆಚ್ಚಿನ ಪರೀಕ್ಷೆಗಾಗಿ ತೆಗೆದುಕೊಂಡು ಪರೀಕ್ಷಾಲಾಯದಲ್ಲಿ ಪರೀಕ್ಷಿಸಿ, ಈ ಕೆಳಕಂಡಂತೆ ವರದಿ ನೀಡಿರುತ್ತಾರೆ.

| ಕ್ರ.ಸಂ | ಮ್ಯಾನ್‌ಹೋಲ್‌ಗಳ ವಿವರ | ಸಿಮೆಂಟ್ Quantity | ಷರಾ |
|---|---|---|---|
| 1 | ಮ್ಯಾನ್‌ಹೋಲ್ 417- ಪ್ರಶಾಂತನಗರ ಪೋಲೀಸ್ ಕ್ವಾಟ್ರಸ್ ಬಳಿ | 30.5 % | ಪ್ಲಾಸ್ಟರಿಂಗ್‌ನ Proposition 1:3 ಆಗಿದ್ದು, ಸಿಮೆಂಟ್ ಶೇ. 25% ಇರಬೇಕಾಗಿದ್ದು, ಎಲ್ಲಾ Sample ಗಳಲ್ಲಿ ಹೆಚ್ಚಿಗೆ ಇರುತ್ತದೆ. |
| 2 | ಮ್ಯಾನ್‌ಹೋಲ್ 2- ಪ್ರಶಾಂತನಗರ KSRTC ಡಿಪೋ ಬಳಿ | 28.55 % | |
| 3 | ಮ್ಯಾನ್‌ಹೋಲ್ 365- ನಿಮ್ಮಾಕಲಕುಂಟೆ | 28.5 % | |
| 4 | ಮ್ಯಾನ್‌ಹೋಲ್ 102 - ನಂದಿ ರಸ್ತೆ | 28 % | |
| 5 | ಮ್ಯಾನ್‌ಹೋಲ್ 200 – IDSMT Layout | 25.5 % | |
| 6 | ಮ್ಯಾನ್‌ಹೋಲ್ 464 – ಮಂಚನಬಲೆ ರಸ್ತೆ | 35.5 % | |
| 7 | ಮ್ಯಾನ್‌ಹೋಲ್ 58 – ಎಂ.ಜಿ.ರಸ್ತೆ | 38.5 % | |
| 8 | ಮ್ಯಾನ್‌ಹೋಲ್ 120 - ಬಿ.ಬಿ.ರಸ್ತೆ (Post Office) | 40.5 % | |
| 9 | ಮ್ಯಾನ್‌ಹೋಲ್ 115 - ಪ್ರಶಾಂತ ನಗರ | 31. % | |
| 10 | ಮ್ಯಾನ್‌ಹೋಲ್ 299 - ಪ್ರಶಾಂತ ನಗರ | 36.2 % | |
| 11 | ಮ್ಯಾನ್‌ಹೋಲ್ 633 – ದೊಡ್ಡ ಭಜನೆ ಮನೆ ರಸ್ತೆ, ಗಂಗಮ್ಮ ಗುಡಿ ಬಳಿ | 28.5 % | |
| 12 | ಮ್ಯಾನ್‌ಹೋಲ್ 512 – ವಾಣಿ ಟಾಕೀಸ್ ಹಿಂಭಾಗ | 34.5 % | |
| 13 | ಮ್ಯಾನ್‌ಹೋಲ್ 577 – ವಾರ್ಡ್ 17 (ಕೋಟೆ) | 36 % | |
| 14 | ಮ್ಯಾನ್‌ಹೋಲ್ Tm2 156 – ಟ್ರಂಕ್ ಮೈನ್ (ಕೆಳಗಿನ ತೋಟ) | 34.5 % | |
| 15 | ಮ್ಯಾನ್‌ಹೋಲ್ 248 – ವಾಪಸಂದ್ರ ಮುಖ್ಯ ರಸ್ತೆ | 31.5 % | |
| 16 | ಮ್ಯಾನ್‌ಹೋಲ್ 121 - ಬಿ.ಬಿ.ರಸ್ತೆ | 37 % | |
| 17 | ಮ್ಯಾನ್‌ಹೋಲ್ 402 - ಪ್ರಶಾಂತ ನಗರ | 32 % | |
| 18 | ಮ್ಯಾನ್‌ಹೋಲ್ 744 - ಬಿ.ಬಿ.ರಸ್ತೆ (ಎಡಭಾಗ) | 35 % | |

ಸದರಿ ಕಾಮಗಾರಿಗಳಲ್ಲಿ ಪರಾಶಕ್ತಿ ಹಾಗೂ ಪಾಣ್ಯಂ 53 ಗ್ರೇಡ್ ಸಿಮೆಂಟ್‌ನ್ನು ಬಳಸಲಾಗುತ್ತಿದೆ. ಇದರ ಪೈಕಿ ಪರಾಶಕ್ತಿ ಸಿಮೆಂಟ್ ಒಳ್ಳೆಯ ಗುಣಮಟ್ಟದಲ್ಲಿದ್ದು, ಪಾಣ್ಯಂ ಸಿಮೆಂಟ್‌ನ್ನು 28 ದಿನಗಳ ಪರೀಕ್ಷೆಗೆ ಒಳಪಡಿಸಿದ್ದು, ಫಲಿತಾಂಶಕ್ಕಾಗಿ ಕಾಯಲಾಗುತ್ತಿದೆ.

ಕಾಮಗಾರಿಗಳಿಗೆ ಬಳಸಲಾಗುತ್ತಿರುವ ಜೆಲ್ಲಿಯ ಗಾತ್ರವು ದಪ್ಪನಾಗಿದ್ದು, ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು ವರದಿ ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು, (ಕೆ.ಎಂ.ಆರ್.ಪಿ) ನಗರಸಭೆ, ಚಿಕ್ಕಬಳ್ಳಾಪುರ ಇವರಿಗೆ ಸೂಚನೆ ನೀಡಲಾಗಿದೆ.

ಮರಳು, ಇಟ್ಟಿಗೆಗಳು ಒಳ್ಳೆಯ ಗುಣಮಟ್ಟದಲ್ಲಿದ್ದು, ಹಾಗೂ ಈಗಾಗಲೇ ನಿರ್ಮಿಸಿರುವ ಮ್ಯಾನ್‌ಹೋಲ್‌ಗಳ ಒಳಭಾಗದಲ್ಲಿರುವ ಪ್ಲಾಸ್ಟರಿಂಗ್ ಹಾಗೂ ನೆಲಹಾಸು ಸಹಾ ಗುಣಮಟ್ಟದಲ್ಲಿದೆ ಎಂದು ವರದಿ ನೀಡಿರುತ್ತಾರೆ.

ಒಟ್ಟಾರೆಯಾಗಿ ಸದರಿ 4ನೇ ತನಿಖಾ ವ್ಯಕ್ತಿಯ ವರದಿಯಂತೆ ಚಿಕ್ಕಬಳ್ಳಾಪುರ ನಗರದಲ್ಲಿ ಕೆ.ಎಂ.ಆರ್.ಪಿ ಯೋಜನೆಯಡಿ ನಿರ್ವಹಿಸುತ್ತಿರುವ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯ ಗುಣಮಟ್ಟದಲ್ಲಿ ಕೊರತೆ ಇದೆ ಎಂದು ಕಂಡುಬಂದಿರುವುದಿಲ್ಲ.